# ಪತ್ರಿಕಾ ಪ್ರಕಟಣೆ

ರಷ್ಯಾದಲ್ಲಿ ಜನ್ಮ ತಳೆದ ಸ್ವೆಟೋಸ್ಲೋವ್ ರೋರಿಕ್ ಭಾರತದ ಹಿಮಾಲಯ ಪರ್ವತದತ್ತ ಆಕರ್ಷಿತರಾಗಿ ಭಾರತದಲ್ಲಿ ನೆಲೆಸಿ ಪ್ರಖ್ಯಾತ ವರ್ಣಚಿತ್ರಕಾರರಾದರು. ಆನಂತರ ಆ ಕಾಲದ ಹೆಸರಾಂತ ಬಂಗಾಳಿ ಮತ್ತು ಹಿಂದಿ ಭಾಷೆಯ ಅಭಿನೇತ್ರಿ ಹಾಗೂ ವಿಶ್ವಕವಿ, ನೋಬೆಲ್ ವಿಜೇತರಾದ ಡಾ. ರವೀಂದ್ರನಾಥ ಠಾಕೂರರ ದೂರದ ಸಂಬಂಧಿಯಾದ ದೇವಿಕಾರಾಣಿಯವರನ್ನು ವಿವಾಹವಾದರು.

ಬೆಂಗಳೂರಿನ ತಾತಾಗುಣಿ ಬಳಿಯಿರುವ ಸ್ವೆಟೋಸ್ಲೋವ್ ರೋರಿಕ್ ಮತ್ತು ದೇವಿಕಾ ರಾಣಿ ಎಸ್ಟೇಟಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರವು ಯೋಜನೆಗಳನ್ನು ರೂಪಿಸುತ್ತಿದೆ. ಒಂದು ವಿಶೇಷವಾದ ವೃಕ್ಷ ಸಮೂಹ, ಗುಲಾಬಿ ತೋಟ, ರೋರಿಕ್‌ರವರ ವಸತಿಗೃಹ, ಸ್ಟುಡಿಯೋ, ಇವರುಗಳ ಸಮಾಧಿಗಳು ಇರುವ ಸನಿಹದ ಸುಂದರವಾದ ಪರಿಸರದ ನಡುವೆ ಅಂತರರಾಷ್ಟ್ರೀಯ ಮಟ್ಟದ ಸಂಗ್ರಹಾಲಯವು ತಲೆ ಎತ್ತಲಿದೆ. ಈ ಸಂಗ್ರಹಾಲಯವು ಭಾರತೀಯ ಚಲನಚಿತ್ರೋದ್ಯಮದ ಧ್ರುವತಾರೆಯಾಗಿದ್ದ, ಭಾರತೀಯ ಸಾಂಸ್ಕೃತಿ ಪರಂಪರೆ, ಸಿದ್ಧಾಂತ ಮತ್ತು ಕಲೆಗಳ ದ್ಯೋತ್ಯಕವಾಗಿ ಮೆರೆದ ಈ ದಂಪತಿಗಳ ನೆನಪಿನ ಕಾಣಿಕೆಯಾಗಿ ಮೈದಳೆಯಲಿದೆ.

ಸ್ವೆಟೋಸ್ಲೋವ್ ರೋರಿಕ್ ಮತ್ತು ದೇವಿಕಾರಾಣಿ ಇವರಿಗೆ ಸಂಬಂಧಪಟ್ಟ ಛಾಯಾಚಿತ್ರ, ಚಲನಚಿತ್ರಗಳು, ಅವರು ಉಪಯೋಗಿಸುತ್ತಿದ್ದ ವಸ್ತುಗಳು, ಪುಸ್ತಕಗಳು, ಪರಿಕರಗಳು (Artifacts), ಪತ್ರ ವ್ಯವಹಾರಗಳು, ವರ್ಣ ಚಿತ್ರಗಳು, ದೇವಿಕಾರಾಣಿಯವರ ಚಲನಚಿತ್ರ ಜಗತ್ತಿನ ಕುರುಹುಗಳು, ಇತ್ಯಾದಿಗಳು., ತಮ್ಮಲ್ಲಿ ಲಭ್ಯವಿದ್ದಲ್ಲಿ ಅವುಗಳನ್ನು ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ, ಪ್ರದರ್ಶಿಸುವುದಕ್ಕಾಗಿ, ನಮ್ಮ ಇಲಾಖೆಗೆ ನೀಡಲು ಸಾರ್ವಜನಿಕರು ಹಾಗೂ ಸಂಬಂಧೀಕರಲ್ಲಿ ಈ ಮೂಲಕ ವಿನಂತಿಸಲಾಗಿದೆ. ಈ ಕೊಡುಗೆಯನ್ನು ಇಲಾಖೆಯು ಕೃತಜ್ಞತೆಯಿಂದ ನೆನೆಯಲಿದೆ.

ಇಲಾಖೆಯ ವಿಳಾಸ: ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ಸರ್ಕಾರ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು–570010, ದೂರವಾಣಿ: 0821–2424673 ಫ್ಯಾಕ್ಸ್: 0821–2424665 ಇ–ಮೇಲ್ commissioneramh@gmail.com ಅಥವಾ commissioner@karnatakaarchaeology.gov.in

**ಡಾ: ಸಿ.ಜಿ.ಬೆಟಸೂರಮಠ**
ಆಯುಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು.

# PRESS NOTE

Born in Russia Svetoslav Roerich, attracted by Himalayan mountains, came to India, became a very reputed painter. Thereafter he married Devikarani, a famous actress of Bengali and Hindi films of yesteryears, and also a grand niece of reknowned poet and Nobel Laureate Dr. Rabindranath Tagore.

Plans are under preparation for establishment of Svetoslav Roerich and Devikarani International Museum in the Tataguni estate near Bangalore by Government of Karnataka. The museum will be located in a beautiful landscape surrounded by a vast "Tree park", rose garden, Roerich House, Studio and their Burials. The proposed museum acts as a memorial and also a glowing tribute to the renowned artists who were a synthesis of art (paintings) and old Indian filmdom, the Indian cultural milieu and philosophy.

The film and photographic archives, their personal belongings, books, artifacts, letter correspondences, paintings, the clippings of film world of Devikarani as an actress and other salient features connected with the life of both Roerich and Devikarani are requested from public, relatives and close associates of late Roerich and Devikarani. They will be displayed in a befitting manner in the proposed museum. All liberal donations or gifts of such type of invaluable objects from the public or personalities or philanthropists will be duly acknowledged with courtesy by the Department. Our contact details: Commissioner, Archaeology, Museums and Heritage, Government of Karnataka, Karnataka Exhibition Premises, Mysore-570010, Karnataka, Telephone : 0821-2424673, Fax : 0821-2424665, e-mail: commissioneramh@gmail.com or commissioner@karnatakaarchaeology.gov.in

Dr. C.G. Betsurmath
Commissioner
Department of Archaeology, Museums
& Heritage, Mysore